Registered Number M. 1290. SATYAVADI (Founded 1917) Every Even

ಸತ್ಯವಾದಿ

ಸೋಮವಾರದ ಸಂಚಿಕೆ (ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 289 | ಸೋಮವಾರ 20—8—45 | 6 ಪೈ

ಅಸ್ಪಿ ಚಿವ್ಮೂರ್ ಸೈದಿಗೆ ಜೀವಾವಧಿ ಶಿಕ್ಷೆ

ಚಿವ್ಮೂರ್ ಅಸ್ಪಿ ಮೊಖದ್ದಸೆಂಗಳ್ಳಿ ಮಾತ್ರವೇ ಅಲ್ಲದೆ ಶಾಸ್ವಾಲ್ ಪುರ ಮತ್ತು ಕುಲಶೇಖರಪಟ್ಟಣ ಪೊಲೀಸ್ ಖದ್ದವೆ-ಗಳಲ್ಲಿ ನುರಣದಂಡನೆಗೆ ಗುರಿಯಾಗಿದ್ದವರಿಲ್ಲಿಗೂ ಗೌರ್ನರ್ ಜನರಲ್ಲರು ಜೀವದಾನ ಮಾಡಿದಾರೆ. ಮರಣದಂಡನೆ ಶಿಕ್ಷೆಯು ಜೀವಾವಧಿ ಸಜವಾಗಿ ಮಾರ್ಪಡಿಸಲಾಗಿದೆ. ಇದು ಮಹಾತ್ಮಾ ಗಾಂಧಿಯವರ ವಿಶ್ವಪ್ರಯತ್ನದ ಫಲವೇ ಆಗಿದೆ. ಇದು ಎಲ್ಲ ಕಡೆಗಳಲ್ಲೂ ಸಂತೋಷವನ್ನುಂಟುಮಾಡಿದೆ.

ರಿ ಂ

ಪೀರ್ಟ್ ಬದುಕಿಕೊಂಡ

ಮಾ || ಪೀಟನ್ನಿಗೆ ಕೋರ್ಟ್-ಮಾರ್ಷಲ್ ನವರು ವಿಧಿಸಿದ್ದ ಮರಣದಂಡನೆ ಶಿಕ್ಷೆಯನ್ನು ಜ್ಞ || ಡಿಗಾಲದ್ದರು ಜೀವಾವಧಿ ಕಾರಾವಾಸ ಶಿಕ್ಷೆಗೆ ಬದಲಾಯಿಸಿದ್ದಾರೆ. ಈ ಕನಿಕರ ಕಾರ್ಯಕ್ಕೆ ಪೀಟನ್ನಿನ ವೃದ್ಧಾಪ್ಯವೂ ಕೋರ್ಟ್-ಮಾರ್ಷಲ್ ನವರ ಶಿಫಾರಸ್ಸೂ ಕಾರಣವಾಗಿದೆ.

ಂ ಂ

ವಿಜಯೋತ್ಸವಕ್ಕೆ ಆಹ್ವಾನ

ಟೋಕಿಯೋದಲ್ಲಿ ವಿಶ್ವರ್ಡು ನಡೆಸಬಹುದಾದ ವಿಜಯೋತ್ಸವ ಸಮಾರಂಭಕ್ಕೆ ಬರ್ಮಾ ರಣಕ್ಷೇತ್ರದಲ್ಲಿ ಹೋರಾಡಿದ ಬ್ರಿಟಿಷ್ ಸೈನಿಕರೂ ಆಹ್ವಾನಿಸಲ್ಪಟ್ಟಿದ್ದಾರೆ.

ಬೆಂಗಳೂರು— ವಿಜಯೋತ್ಸವ ಸಂಬಂಧವಾಗಿ 20 ನೇ ತಾ || ಸೋಮವಾರವೂ ಸರ್ಕಾರಿ ರಜಾ ದಿನವಾಗಿದೆ.

ಂ ಂ

ಮೈಸೂರು— ವಿಜಯೋತ್ಸವದ ಬಗ್ಗೆ ನಿನ್ನೇ ದಿವಸ ಮು || ಸ್ಕೆ || ಮಾಡಿದ್ದ ಕಾರ್ಯಕ್ರಮದಂತೆ ಪಾರ್ಥನೆ, ಆಟ ಪಾಟ, ಅನ್ನವಸ್ತ್ರ ದಾನ ನಡೆಯಿತು.

ರಷ್ಯ ಯುದ್ಧಕ್ಕೆ ಸೇರಿದ ಕಾರಣ ?

ರಷ್ಯಾ ಜರ್ಮನ ಪ್ರಥಮ ಯುದ್ಧವು 1-8-1914 ನೇ ದಿನ ಘೋಷಣೆಗೊಂಡಂತಾಗಿ ಸಮರೋಧಾಸ ಸಂಬಂಧವಾಗಿ ಪಾಪು ಅಭಿಪ್ರಾಯಗಳು ಅನಾವರಣವಾದವು. ಆ ಕಾರಣಾನಂತರ ರಷ್ಯವು ಜರ್ಮನಿಗೆ ಪೋರ್ಟ್ ಆರ್ಥರ್ ಮತ್ತು ಉಕ್ಕಿನ ಕಬರ್ಡಿ ದ್ವೀಪಗಳನ್ನು ಬಿಟ್ಟುಕೊಟ್ಟಿದ್ದಲ್ಲದೆ ಮಂಚೂರಿಯಾವಲ್ಲಿದ್ದ ರಷ್ಯನರೆಲ್ಲರೂ ಆ ದೇಶವನ್ನು ಬಿಟ್ಟು ಸ್ವದೇಶಕ್ಕೆ ಹಿಂದಿರುಗಿದರು. ಕೊರಿಯಾದ ವೈಶಿಸ ಜಪಾನ್ ಅಧಿಕಾರವನ್ನು ಆಂಗೀಕರಿಸಬೇಕಾಯಿತು. ಈ ಕಾರಣಗಳಿಂದ ಳಂ ವರ್ಷಗಳ ನಂತರ ಅದೇ ದಿನ ರಷ್ಯವು ಮಂಚೂರಿಯಾದ್ದೊಕ್ಕೆ ನುಗ್ಗಿ ತನ್ನ ಬಲವನ್ನು ಪ್ರದರ್ಶಿಸಿತು. ಹಿಂದಿನ ಯುದ್ಧದಲ್ಲಿ ತಾನು ಕಳೆದು ಕೊಂಡಿದ್ದ ತನ್ನ ಭೂ ಭಾಗಗಳನ್ನೂ, ಸೌಕರ್ಯಗಳನ್ನೂ ಪುನಹ ಪಡೆಯುವ ಪರಿಣಾಮವು ಸುಪ್ತನಿಬಾಧವು.

ಂ ಂ

ಐದು ಲಕ್ಷ ರೂ. ನಿಧಿ

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಮಹಾತ್ಮ ಗಾಂಧಿಯವರು ಮುಂದಿನ ಡಿಸೆಂಬರ್ ತಿಂಗಳಲ್ಲಿ ಮದ್ರಾಸಿಗೆ ಬರಲಿರುವರಷ್ಟೆ. ಆಗ ಅವರಿಗೆ ಐದು ಲಕ್ಷ ರೂ. ನಿಧಿಯರ್ಪಿಸಲಾಗುವುದು.

ಮೈಸೂರು— ವಿಜಯೋತ್ಸವ ಸಂತೋಷಕ್ಕಾಗಿ ನಿನ್ನೇ ದಿವಸ ಜವಳಿ ವರ್ತಕರ ಸಂಘದ ಸದಸ್ಯರು ತಮ್ಮ ವ್ಯಾಪಾರ ಸಂಸ್ಥೆಗಳಿಗೆ ರಜವಿತ್ತಿದ್ದರು.

ಂ ಂ

ಇಸ್ಟ್ರಂಬಾಲ್— ಮುಂದಿನ ನವೆಂಬರ್ ಹೊತ್ತಿಗೆ ಆಗಧವ ಟರ್ಕಿ-ರಷ್ಯಾ ಒಪ್ಪಂದ ನವೀಯವಾಗುವುದೆಂದೂ, ಮುಂದೆಯೂ ಟರ್ಕಿ ರಷ್ಯಾ ಸೌಹರ್ದ ಸೂಚಾದಿಸದಿದ್ದರೆ ಅದರ ಸ್ಥಿತಿ ಕಳವಳಕಾರಿಯಾದುದೆಂದೂ ಹೇಳಲಾಗಿದೆ.

ಭಾರತೀಯ ಸಭೆ

'ಹಿಂದೂ ಮಹಾಸಭೆ' ಯೆಂಬ ಹೆಸರನ್ನು 'ಭಾರತೀಯ ಸಭೆ' ಎಂದು ಬದಲಾಯಿಸಬೇಕೆಂದು ಡಾ | ಶ್ಯಾಮ ಪ್ರಸಾದ್ ಮುಖರ್ಜಿ ಸೂಚಿಸಿದ್ದಾರೆ.

ಂ ಂ

ವಿಟಮಿನ್

ಅಮೇರಿಕ ಪ್ರೊಫೆಸರ್ ಹಾಲ್ಡಿಯವರು ವಿಟಮಿನ್ನುಗಳ ವಿಚಾರದಲ್ಲಿ ಜನ ವಿಶ್ವಾಸವು ಅಂಧ ವಿಶ್ವಾಸ ಮಾತ್ರವೆಂದೂ, ಅದೂ ಒಂದು ಬಗೆಯ ಹುಚ್ಚೆಂದೂ, ವಿಟಮಿನ್ನುಗಳನ್ನು ನುಂಗಿದರೂ ನುಂಗದಿದ್ದರೂ ವ್ಯತ್ಯಾಸವೇನೂ ಇರುವುದಿಲ್ಲವೆಂದೂ ಆರೋಗ್ಯ ಲಾಭಕ್ಕಾಗಿ ವಿಟಮಿನ್ನುಗಳ ಕಡೆ ದೃಷ್ಟಿಯಿಡುವ ದಕ್ಕಿಂತ ಉಪವಾಸದ ಕಡೆ ನೆಲೆಗೊಳಿಸುವುದು ಚಿತವೆಂದೂ ತಿಳಿಸಿರುವರು.

ಂ ಂ

ಲಂಡನ್ನಲ್ಲಿ ಮನೆಗೆ ಅಭಾವ

ಹಿಟ್ಲರಿನ ಬಾಂಬುಗಳಿಂದ ಅನೇಕ ವಸತಿಗಳು ನಾಶವಾದ ಕಾರಣದಿಂದ ನಿವಾಸ ಗೃಹಗಳ ಅಭಾವವು ಹೆಚ್ಚಿದೆ. ಸಂಸಾರಕ್ಕೆ ಅವಶ್ಯಕವಾದ ಮಂಚ, ಇತ್ಯಾದಿಗಳು ಒಂದು ನಿವಾಸ ಗೃಹಕ್ಕೆ ಅವಶ್ಯಕವಾದ ಪದಾರ್ಥಗಳನ್ನು ಮನೆ ಮಾಲೀಕರಿಂದ ಕೊಂಡುಕೊಂಡರಲ್ಲದೇ ಆ ಗೃಹಗಳು ಬಾಡಿಗೆಗೆ ದೊರೆಯುತ್ತಿಲ್ಲ. ಒಂದು ಸ್ಥಳದಿಂದ ಇತರ ಸ್ಥಳಕ್ಕೆ ಹೋಗ ಬೇಕಾದಾಗ ಆ ಪದಾರ್ಥಗಳನ್ನು ಬಾಡಿಗೆದಾರರುಗಳು ಸಾಗಿಸಿಕೊಂಡು ಹೋಗಲು ಸೌಕರ್ಯಗಳಿಲ್ಲದ ಕಾರಣದಿಂದ ಅತಿ ಅಲ್ಪ ಬೆಲೆಗೆ ಮನೆಯ ಮಾಲೀಕರಿಗೇ ಕೊಟ್ಟು ಹೋಗುವರು. ಆದರೆ ಹೊಸದಾಗಿ ಬಾಡಿಗೆಗೆ ಬರುವವರಿಗೆ ಹೆಚ್ಚಿನ ಬೆಲೆಗೆ ಮಾರಿ ಲಾಭ ಹೊಂದುತ್ತಿರುವರು.

ವರ್ತಮಾನ ಸಂಗ್ರಹ

ಅಹಮದಾಬಾದಿನಲ್ಲಿನ ಪ್ರೌಢಶಾಲೆಯ ಹೈಸ್ಕೂಲಿನ 400 ಮಂದಿ ವಿದ್ಯಾರ್ಥಿಗಳು ಮುಷ್ಕರ ಹಿಡಿದಿದ್ದಾರೆ.

ಜಪಾನ್ ಆಕ್ರಮಣದಲ್ಲಿ ಭಾರತೀಯ ಸೈನೀಕರೂ ಸೇರಿಸಲ್ಪಡಬೇಕೆಂದು ಜಪಾನು ಕೇಳಿಕೆಯಾಗಿದೆ.

ಗಾಂಧೀಜಿ ಬಂಗಾಳಾಕ್ಕೆ ನವೆಂಬರಿನಲ್ಲಿ ಭೇಟಿ ಕೊಡುವರೆಂದು ತಿಳಿದು ಬಂದಿದೆ.

1942 ರ ಗಲಭೆ ಸಂಬಂಧದಲ್ಲಿ ಮರಣ ದಂಡನೆಗೊಳಗಾಗಿದ್ದ ಸು ಕ್ಲಾ ಹೇಮು ಕಲಾನಿ ಎಂಬಾತನ ತಾಯಿ ಮಾ | ಅಜಾದರು ಒಂದು ಪಡಕವನ ಬಹುಮಾನಿಸಿದರು.

ಸ್ವಿಡ್ಜರ್ಲೆಂಡಿನಲ್ಲಿದ್ದ ಜಪಾನ್ ರಾಯಭಾರಿಗಳೆಲ್ಲಾ ಪುಟ್ಟುಕೋಲುಮಹಾಲಾಗಿದೆ.

ಬೆಂಗಳೂರು— ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀ ಶಿವಪ್ಪ ರವರು ಸರ್ಕಾರದವರು ಅವರ ಮೇಲೆ ಮಾಡಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರೆಂದು ದಸ್ತಗಿರಿ ಮಾಡಿ ಟ್ಟು ನಾಗಸಂದ್ರಗಾ ಮಕ್ಕೆ ಕರ್ಯ್ಯೊಯ್ಯಲ್ಪಟ್ಟರು.

ಜೈನಾದಲ್ಲಿ ಕಮ್ಯುನಿಸ್ಟರಿಗೂ ಪ್ರಭುತ್ವ ಸರಕಾರಕ್ಕೂ ಏದೊಂದೂ ಒಪ್ಪಂದವಾಗದೆ, ನಾರ್ಕಿಂಗ್ ಮತ್ತು ಪೀಪಿಂಗ್ ಮಧ್ಯೆ ಹೊಡೆದಾಟ ನಡೆಯುತ್ತಿದೆ. ಇದು ಹೀಗೇ ಹೆಚ್ಚಾದರೆ ಭಾರಿ ಸಿವಿಲ್ ವಾರ್ ಆಗುವುದೆಂದು ಹೇಳಲಾಗಿದೆ.

ಯುದ್ಧ ಮುಗಿದ ಕಾರಣ ಇಂಗ್ಲಾಂಡಿನ ಸರ್ಕಾರದ ಸಚ್ಚಿವರು ಇಲಾಖೆಗಳ ನೌಕರರಲ್ಲಿ ಶೇಕಡ 25 ರಷ್ಟು ಕಡಿಮೆ ಮಾಡುವರೆಂದೂ, ಕೆಲವರನ್ನು ಆ ಪ್ರಾಂತ್ಯ ಸರಕಾರಗಳಿಗೆ ಕಳುಹಿಸಲಾಗುವುದೆಂದೂ ತಿಳಿಯಬಂದಿದೆ.

ಆ ಲ್ಲಿ — ಇ ಲ್ಲಿ

ಈಗಿನ ಭಾರತ ಪೆಕ್ಕೆಟರಿ ಆಫ್ ಸ್ಟೇಟ್‌ರಾದ ಮಿ || ಪೆಥಿಕ್ ಲಾರೆನ್ಸ್‌ರು ಹಿಂದೆ ಮೈಸೂರಿಗೆ ಬಂದಿದ್ದಾಗ್ಗೆ ಒಂದು ಸಾರ್ವಜನಿಕ ಸಭೆಯಲ್ಲಿ ಮಿ || ಲಾರೆನ್ಸ್‌ರೂ, ಮೈಸೂರು ಕಾಂಗ್ರೆಸ್ ಮುಖಂಡರಲ್ಲೊಬ್ಬರಾದ ಶ್ರೀ ಭಾಷ್ಯಂರವರೂ ಕೂಡಿ ಭಾಷಣಮಾಡಿದ್ದರಂತೆ.

ಂ ಂ

ಜೆನ್ಸರು ಭಾರತದ ತಾತ್ಕಾಲಿಕ ವ್ಯವಸ್ಥೆಗೆ ಲೀಗು ವಿರೋಧವಾಗಿದೆಯೆಂದು ಹೇಳಿತ್ತು, ಸ್ಥಿರವಾದ ವ್ಯವಸ್ಥೆಯೆ ಬೇಕೆಂದಿದ್ದಾರೆ. 'ಜರ್ಮನಿಯ ಯುದ್ಧ ಮುಗಿದು, ಜಪಾನಿನ ಯುದ್ಧವು ಗಿಯುತ್ತಿರುವಾಗ ತಾತ್ಕಾಲಿಕ ವ್ಯವಸ್ಥೆಯೇಕೆ' ಎಂದನರ ಪ್ರಶ್ನೆ ! ಹಿಂದೂ ಸ್ಥಾನದ ಸ್ವಾತಂತ್ರ್ಯ ಸಮಸ್ಯೆಯ ಮೊಡಲೇ ಪಾಕಿಸ್ತಾನಕ್ಕೆ ಒಪ್ಪಿಗೆ ಸಿಗಬೇಕು. ಪಾಕಿಸ್ತಾನವನ್ನು ಬಿಟ್ಟು ಲೀಗು ಯಾವ ವ್ಯವಸ್ಥೆಗೂ ಒಪ್ಪದೆಂದು ದೃಢಪಡಿಸಿದ್ದಾರೆ.

ಂ ಂ

ನಿಜವಾದ ಶಾಂತಿಯು ನೆಲೆಸಿಲ್ಲಬೇಕಾದರೆ ಗ್ರೀಸಿನಲ್ಲಿ ಪ್ರಜಾಪ್ರಭುತ್ವ ಬಲವಾಗಿ ಬೇರೂರುವುದು ಅಗತ್ಯ. ಗ್ರೀಸಿನಲ್ಲಿ ಹಿಂದಿನ ಸಾರ್ವಭೌಮರ ಅಡಳಿತವನ್ನು ವುನಃ ಸ್ಥಾಪಿಸಲು ಪ್ರಯತ್ನಿಸಿದ ಜರ್ಚಿಲ್ ಮತ್ತು ಕಂಪೆನಿ ಸೋತು ಹೋಗಿದೆ. ಪೋಸ್ಡಾಂ ಒಪ್ಪಂದಕ್ಕೆ ಸಹಿ ಹಾಕಿದ ಶಕ್ತಿಗಳೆಲ್ಲ ಗ್ರೀಸಿನಲ್ಲಿ ಪ್ರಜಾ ಪುರೋಗಾಮಿ ಜನತೆಗೆ ಬೆಂಬಲ ಕೊಡಬೇಕಾದುದು ಅಗತ್ಯ.

ಂ ಂ

ಯಾವ ಸೈನ್ಯದಲ್ಲಿ ಅನೇಕ ಹಿಂದೀ ಪಥಕಗಳು ಕೆಲಸ ಮಾಡಿದವೋ ಮತ್ತು ಯಾವುದು ನಾಲ್ಕು ವರ್ಷಗಳವರೆಗೆ ನಡೆದ ಘೋರ ಕಾಳಗಗಳಲ್ಲಿ ಉತ್ತರ ಆಫ್ರಿಕಾದ ಅಲಾಮಿನಾದಿಂದ ಯೂರೋಪಿನ ಆಲ್ಪ್ಸ್ ಪರ್ವತದವರೆಗೆ 2500 ಮೈಲುಗಳ ಪ್ರದೇಶಗಳ ಮೇಲಿಂದ ಮುನ್ನುಗ್ಗಿ ಮತ್ತು ಮುಂಚಿನಲ್ಲಿ ಹೋರಾಡುತ್ತಾ ಹೋಯಿತೋ ಆ ಪ್ರಸಿದ್ಧವಾದ 8 ನೇ ಸೈನ್ಯವು ಜುಲೈ 29 ಕ್ಕೆ ವಿಸರ್ಜಿಸಲ್ಪಟ್ಟಿತು. ಈ ಸೈನ್ಯವನ್ನು ಲಾರ್ಡ್ ವೇವೆಲ್ಲರು ಮತ್ತು ಜ || ಐಸ್ಕ್‌ಹೋವರ್ ಮತ್ತು ಜ || ಮಾರ್ಕ್ ಕ್ಲಾರ್ಕರು ಪ್ರಶಂಸಿಸಿದ್ದಾರೆ.

2 ನೇ ಮಹಾಯುದ್ಧ ಮುಕ್ತಾಯ

ಇದಕ್ಕೆ ಕಾರಣಭೂತರಾದ ಹಿಟ್ಲರ್, ಮುಸಲೋನಿ, ಮಿಕಾಡೋ ಪೈಕಿ, ಹಿಟ್ಲರ್, ಮುಸಲೋನಿಗಳ ಆಟವು ಕೆಲವು ತಿಂಗಳ ಹಿಂದೆಯೇ ಮುಗಿಸಿತು. ಮಿಕಾಡೋ ಸಂತಾಕ್ಯವೂ ಈಗ ಶಣ್ಣಗಾಯಿತು.

ಜಪಾನ್ ಸುಸೂಕಿ ಮಂತ್ರಿಮಂಡಲ ರಾಜೀನಾಮೆಯಿತ್ತಿದೆ.

ಜಪಾನ್ ಬಳಿ ಮಿತ್ರ ನೌಕೆಗಳ ಮೇಲೆ ವಿಮಾನಧಾಳಿಯಾಯಿತು.

ತಮ್ಮ ಪಡೆಗಳು ತಕ್ಷಣ ಯುದ್ಧ ನಿಲ್ಲಿಸಬೇಕೆಂದು ರಾಜಾಜ್ಞೆಯಾಗಿದೆ.

ಮಂತ್ರಿಮಂಡಲ ರಚಿಸಲು ರಾಜಸಂಬಂಧಿಯೊಬ್ಬನಿಗೆ ಆಹ್ವಾನವಿತ್ತಿದೆ.

ಆಗ್ನೇಯ ಏಷ್ಯದಲ್ಲಿ ಕದನ ನಿಲ್ಲಿಸಬೇಕೆಂಬ ಆಜ್ಞೆ ಜಾರಿಯಾಯಿತು.

ಶಾಂತಿ ಪತ್ರ ರುಜುವಿಗಾಗಿ ಜಪಾನ್ ರಾಯಭಾರಿ ಬೇಕೆಂದಿದ್ದರು.

ಈ ವಿಷಯದಲ್ಲಿ ಜಪಾನ್ ಉತ್ತರವನ್ನೇನೂ ಕೊಟ್ಟಿಲ್ಲ.

ಜಪಾನರ ಶರಣಿಗಾಗಿ ಮ್ಯಾನಿಲಾದಲ್ಲಿ ಸಿದ್ದತೆಗಳು ನಡೆಯುತ್ತಿವೆ.

ಶಾಂತಿಯ ಬಗ್ಗೆ ಜಪಾನಿ ರಾಯಭಾರಿ ಮ್ಯಾನಿಲಾಕ್ಕೆ ಬರುವರು.

ಲಂಡನ್, ಆ 14 — ಸಂಯುಕ್ತ ಅಮೇರಿಕಾ ಯುನೈಟೆಡ್ ವಾರ್ತಾ ಕಛೇರಿಯ ಹೇಳಿಕೆಯಂತೆ, ಜಪಾನಿನ ಸರ್ಕಾರವು ಅಮೇರಿಕಾದ ಶರಣಾಗತ ಶರತ್ತುಗಳನ್ನು ಅಂಗೀಕರಿಸುವುದಾಗಿ ಜಪಾನ ವಾರ್ತಾಸಂಸ್ಥೆ ತಿಳಿಸಿದೆ.

ಚೀನೀ ಸರ್ಕಾರ ಮತ್ತು ಕಮ್ಯುನಿಸ್ಟರಲ್ಲಿ ಮತಬೇಧ ಉಂಟಾಗುತ್ತಿರುವುದು ಜಪಾನಿನ ಹಂಚಿಕೆಯ ಬಗ್ಗೆ ಎಂದು ತಿಳಿಯುಬಂದಿದೆ.

ಚಿಯಾಂಗ್ ಕೈಷೇಕ್ ದೇಶದ ಪರಿಸ್ಥಿತಿಯನ್ನು ಚರ್ಚಿಸುವ ಸಲುವಾಗಿ ಚೀನೀ ಕಮ್ಯುನಿಸ್ಟ್ ನಾಯಕರುಗಳಿಗೆ ಆಹ್ವಾನವಿತ್ತಿರುವುದಾಗಿ ತಿಳಿದುಬಂದಿದೆ.

ಸಂಯುಕ್ತ ರಾಷ್ಟ್ರಗಳು ಈ ಯುದ್ಧದಲ್ಲಿ ಐವತ್ತೈದು ಮಿಲಿಯನ್ ಜನಗಳ ನಷ್ಟವನ್ನು ಹೊಂದಿದೆ. ಯುದ್ಧಕ್ಕಾಗಿ ಒಂದು ಟ್ರಿಲಿಯನ್ ಡಾಲರ್ ವೆಚ್ಚವಾಗಿದೆ. ಮಿತ್ರರು ೧೨ ಮಿಲಿಯನ್ ಖೈದಿಗಳನ್ನು ಸೆರೆ ಹಿಡಿದಿರುವರು.

ಲಂಡನ್ ಆ 16 — ಜಪಾನಿನ ಹೊಸ ಮಂತ್ರಿಮಂಡಲ ಸ್ಥಾಪಿಸಲು ಚಕ್ರವರ್ತಿ ಹಿರೋಹಿಟೋನನ್ನು ಚಕ್ರವರ್ತಿ ಸೇವಿಸಿರುವರು. ಇವರೇ ಮುಖ್ಯಮಂತ್ರಿಗಳಾಗಿರುವರು.

ಲಂಡನ್, ಆ 15 — ಅಣು ಬಾಂಬಿನ ಗುಟ್ಟಿನ ವಿಷಯದಲ್ಲಿ ರಷ್ಯಾಕ್ಕೆ ಭಾಗವಿಲ್ಲವೆಂದು ಬ್ರಿಟನ್ ಹೇಳಿಕೆಯಾಗಿದೆ.

ಇಟಲಿಯಲ್ಲಿ ರಾಜತ್ವ ಹೋಗಬೇಕು

ಪೇರಿಸ್, ಆ 12 — ನವೆಂಬರ್‌ನಲ್ಲಿ ನಡೆಯುವ ಇಟಾಲಿಯನ್ ಕಾನ್ಸ್ಟಿಟ್ಯುಯಂಟ್ ಅಸೆಂಬ್ಲಿಯ ಚುನಾವಣೆಯ ನಂತರ, ಇಟಲಿಯಲ್ಲಿ ರಾಜತ್ವವನ್ನು ಮೂಲೆಗೊತ್ತರಿಸಿ, ಪ್ರಜಾಪ್ರಭುತ್ವ ಸರ್ಕಾರ ಸ್ಥಾಪಿಸಲಾಗುವುದೆಂದು ಇಲ್ಲಿಗೆ ಬಂದಿದ್ದ, ಇಟಾಲಿಯನ್ ವೈಸ್ ಪ್ರಿಮಿಯರ್ ಮಿ | ಪಿಯೆಟ್ರೊ ನೆನಿಯವರು ತಿಳಿಸಿರುವರು.

ಪ್ಯಾರಿಸ್ ಆ 13 — ಪೀಟನ್ನಿನ ವಿಚಾರಣೆ ಮುಗಿಯಿತು. ಅತನಿಗೆ ಮರಣದಂಡನೆಯು ವಿಧಿಸಲ್ಪಡಬೇಕೆಂದು ಪ್ರಾಸಿಕ್ಯೂಟರು ಮನವಿಮಾಡಿದರು. ಈ ವಾರದಲ್ಲೇ ತೀರ್ಪು ಹೊರಬೀಳುವುದು.

೫ ವಾರಗಳು

ಲಂಡನ್ ಆ 15— ಪೋಸ್ಟ್‌ಡಾಂ ಕಟ್ಟಕಡೆ ಆಜ್ಞೆ ಹೊರಟ 3 ವಾರಗಳಲ್ಲಿ ಅಣು ಬಾಂಬಿನ ಹಾವಳಿ, ರಷ್ಯಾದ ಯುದ್ಧ ಘೋಷಣೆ, ಜಪಾನ್ ಶರಣಾಗತ, ಎಲ್ಲಾ ನಡೆದುಹೋಯಿತು —

ಜುಲೈ, 26 — ತ್ರಿಮೂರ್ತಿಗಳ ಪೋಸ್ಡಾಂ ಕಟ್ಟ ಕಡೆ ಆಜ್ಞೆ.

ಜುಲೈ, 27 — ಆಜ್ಞೆ ನಿರಾಕರಿಸಲಾಗುವುದೆಂದು ಜಪಾನ್ ನ್ಯೂಸ್ ಏಜನ್ಸಿ ಹೇಳಿಕೆ.

ಆ. 5 — ಪ್ರಥಮ ಅಣು ಬಾಂಬಿನ ಪ್ರಯೋಗ.

ಆ 8 — ರಷ್ಯಾ ಯುದ್ಧ ಘೋಷಿಸಿತು.

ಆ. 9 — 2 ನೇ ಅಣು ಬಾಂಬಿನ ಪ್ರಯೋಗ.

ಆ. 10 — ಜಪಾನ್ ಸರಕಾರ ಶರಣು ಹೋಗಲು ಸಿದ್ಧ. ಆದರೆ ಚಕ್ರವರ್ತಿಗಳಿಗೆ ರಾಜ್ಯಧಿಕ್ಯಚ್ಯುತಿಯಾಗಕೂಡದೆಂದು ಟೋಕಿಯೋ ರೇಡಿಯೋ ಹೇಳಿಕೆ.

ಆ. 12 — ಮಿತ್ರ ಮುಖ್ಯ ಸೇನಾನಿ ಆಜ್ಞೆಯಂತೆ ನಡೆಯುಬೇಕೆಂದು ಮಿತ್ರರ ಉತ್ತರ.

ಲಂಡನ್ ಆ 14 — ಮಿತ್ರರ ಹೇಳಿಕೆಯಂತೆ ಶರಣಾಗತವಾಗಲು ಚಕ್ರವರ್ತಿಗಳು ಸಂದೇಶ ಕೊಡುವರೆಂದು ಜಪಾನ್ ವಾರ್ತಾ ಸಂಸ್ಥೆ ತಿಳಿಸುವುದು.

ಸೈದಾಪೇಟೆ — ಹಾಲಿಗೆ ನೀರು ಬೆರಸಿ ಮಾರಿದನೆಂದು ಹಿಟ್ಟ ಹಾಲಿನವನಿಗೆ ರೂ. 50 ಜುಲ್ಮಾನೆ ವಿಧಿಸಲಾಗಿದೆ.

ಂ ಂ

ಮಹೋದ್ರ ಚೌದ್ರಿ ಗಲ್ಲಿಗೇರಿಸಲ್ಪಟ್ಟ ಪ್ರಕರಣದ ವಿಮರ್ಶೆ ಸರಿಯಾಗಿ ಆಗಬೇಕೆಂದು ಗಾಂಧೀಜಿ ಹೇಳಿದರು.

ಂ ಂ

ಎರಡು ಅಣು ಬಾಂಬಿನ ತಯಾರಿಕೆಗೆ ರೂ. ೬೦೦ ಕೋಟಿ ಖರ್ಚಂತೆ!

ಂ ಂ

ಪ್ರತಿಬಂಧಕಾಜ್ಞೆ ವಜಾನಿಮಿತ್ತ ಲಾಹೋರಿನ ೬೯ ಕಾಂಗ್ರೆಸ್ ಕಟ್ಟಡಗಳು ಕಾಂಗ್ರೆಸಿಗೆ ವಹಿಸಲ್ಪಡುವುದು.

ಂ ಂ

ಲಂಡನ್—ಹೊಸ ಪಾರ್ಲಿಮೆಂಟಿನಲ್ಲಿ ಚಕ್ರವರ್ತಿಗಳು ಪ್ರಜಲಿತ ವಿಷಯಗಳನ್ನೊಳಗೊಂಡ ಭಾಷಣ ಮಾಡಿದರು.

ಜಯ ಲಭಿಸಲೆಂದು ೬ ವರ್ಷದ ಮಗುವನ್ನು ಬಲಿಯಿತ್ತರು

ಸ್ಥಳೀಕ ಮುಖಂಡನೊಬ್ಬನನ್ನು ಅರಿಯುದರ ಕಾರಿನ ವಾದ ವಿವಾದಗಳಿದ್ದು ಆಗ್ರಾ ಎಂಬಲ್ಲಿ ಐದು ಮಂದಿ, ತಂತಮ್ಮ ಉಮೇದ್ವಾರರಿಗೆ ಜಯವಾಗಬೇಕೆಂದು ಅರು ವರ್ಷದ ಮಗುವನ್ನು ಕಡಿದು ಅದರ ಬೇರೆ ಬೇರೆ ಅಂಗಗಳನ್ನು ದೇವತೆಗೆ ಬಲಿಯಿತ್ತರು. ಈ ಅಮಾನುಷ ಕೃತ್ಯದ ಕುರಿತು ವಿಚಾರಣೆ ನಡೆದು ಐವರಿಗೂ ಮರಣದಂಡನೆಯನ್ನು ವಿಧಿಸಲಾಗಿದೆ.

———

ಶಕುಂತಲಾ ಚಿತ್ರದ ಶತಮಾನೋತ್ಸವ

ವೆಚ್ಚವೆಲ್ಲವೂ ಕಳೆದು, ಮುಂಬಯಿನ ಸ್ವಸ್ತಿಕ್ ಟಾಕೀಸಿನಲ್ಲಿ ಶತಮಾನೋತ್ಸವವನ್ನು ಮುಗಿಸಿ, ಶಕುಂತಲಾ ಚಿತ್ರವು ತನ್ನ ದಿಗ್ದರ್ಶಕ ಶಾಂತಿರಾಮರಿಗೆ ಮುಂಬಯಿ ಒಂದರಲ್ಲೇ ಹದಿನೇಳುವರೆ ಲಕ್ಷ ರೂ. ಗಳನ್ನು ಗಳಿಸಿಕೊಟ್ಟಿದೆ.

———

ಅಣುಬಾಂಬು ಜರ್ಮನರ ಪ್ರಯೋಗ

ಮಿ॥ ಚರ್ಚಿಲ್ಲರ ವಿಜ್ಞಾನ ಸಲಹೆಗಾರ ಲಾರ್ಡ್ ಸಭೆಯಲ್ಲಿ ಕೂಟ್ಟ ಒಂದು ಹೇಳಿಕೆಯನ್ನು ಕೇಳಿದರೆ ಮೈ ಜುಮ್ಮೆನಿಸತ್ತದೆ. ಇಡೀ ಜಗತ್ತನ್ನೇ ನಾಶಪಡಿಸಬಲ್ಲ 'ಅಣುಬಾಂಬ್' ಎಂಬ ಭಯಂಕರ ಅಸ್ತ್ರೋಪಕರಣವನ್ನು ನಾಜಿಗಳು ಮುಕ್ಕಾಲು ಪಾಲು ತಯಾರಿಸಿದ್ದರೆಂದು ವರದಿಯಿತ್ತರು.

ಈ ಬಾಂಬಿನ ಪ್ರಥಮ ಪ್ರಯೋಗ ಹಿರೊಶಿಮಾ ಮೇಲೆ ನಡೆದು ಶೇಕಡ ೬೦ ರಷ್ಟು ಪಟ್ಟಣ ನಾಶವಾಯಿತು.

———

ಡಾ। ಕೊಟ್ನೀಸ್

ಶಾಂತಿರಾವರ ಡಾ। ಕೊಟ್ನಿಸ್ ಚಿತ್ರದ ಜಾಗತಿಕ ಹಕ್ಕಿಗಾಗಿ ೨೭ ಲಕ್ಷ ರೂ. ಗಳನ್ನು ಕೊಡುವುದಾಗಿ ವಾರ್ನರ್ ಬ್ರದರ್ಸ್ ಸಂಸ್ಥೆ ತಿಳಿಸಿರುವದಂತೆ

ಕಳೆದವಾರ

ಮಿರೇಜ್ ಏ 12 — ಜಮಖಂಡಿಯಲ್ಲಿ ಪ್ರಜೆಗಳ ಮತಾಚಾರಕ್ಕೆ ವಿರುದ್ಧವಾಗಿ ಶಾರದಾ ಆಕ್ಟನ್ನೂ, ಬಾಲ್ಯವಿವಾಹ ನಿರೋಧೆವನ್ನೂ ಜಾರಿಗೆ ರುವುದಿಲ್ಲವೆಂದು ಪ್ರಕಟವಾಗಿದೆ.

ಂ ಂ ಂ ಂ

ಲಕ್ನೋ ಏ 11 — ಗೊಂಡಾದ ವರ್ತಕ ಸಂಘದ ಸೆಕ್ರಿಟರಿ ಮಿ॥ ಅಬ್ದುಲ್ ರಜಾಕ್ 4 ಆಣೆಯ ಒಂದು ಎಲೆಕ್ಟ್ರಿಕ್ ಟಾರ್ಚ್ ಬಲ್ಬನ್ನು 6 ಆಣೆಗೆ ಮಾರಿದ್ದಕ್ಕಾಗಿ ರೂ. 20000 ಜುಲ್ಮಾನೆ ಮತ್ತು 3 ತಿಂಗಳು ಕಠಿಣ ಸಜಾ ವಿಧಿಸಲಾಗಿದೆ.

ಂ ಂ ಂ ಂ

ವಿಚಾರಣೆಯಾಗುವ ಯುದ್ಧ ತಕ್ಸೀರುದಾರರ ಪಟ್ಟಿಯಲ್ಲಿ ವಾನ್ ಪಾಪೆನ್ ಮೊದಲಿನೆಯವರಾಗಿದ್ದಾರೆ.

ಂ ಂ ಂ ಂ

ವಾಷಿಂಗ್ಟನ್ ಏ 11 — ಜಪಾನ್ ಚಕ್ರವರ್ತಿ ಹಿರೋಹಿಟೋ ಒಬ್ಬ ಯುದ್ಧ ತಕ್ಸೀರುದಾರನಾಗಿ ವಿಚಾರಣೆಗೊಳಗಾಗ ಬಹುದೆಂದೂ, ರಾಜಕುಮಾರನು ರೀಜನ್ಸಿಯಲ್ಲಿ ರಾಜ್ಯಭಾರ ಮಾಡಬಹುದೆಂದೂ, ಹೇಳಲಾಗಿದೆ.

ಂ ಂ ಂ ಂ

ಲಂಡನ್, ಏ 13 — ಮಿತ್ರರು ಕಳುಹಿಸಿರುವ ಜಪಾನ್ ಶರಣಾಗತ ಕರಾರುಗಳಿಗೆ ಜಪಾನಿಂದ ಪ್ರತಿ ಕ್ಷಣದಲ್ಲೂ ಉತ್ತರ ನಿರೀಕ್ಷಿಸಲಾಗಿದೆ. ಜಪಾನ್ ಮಂತ್ರಿ ಮಂಡಲವು ತೀವ್ರ ಚರ್ಚೆ ನಡೆಸುತ್ತಿರುವುದೆಂದೂ ಹೇಳಲಾಗಿದೆ. ಫೆಸಿಫಿಕ್ ಯುದ್ಧವೇನೋ ಮುಂದುವರಿಯುತ್ತಲೇಯಿದೆ. ಜಪಾನ್ ಮಂತ್ರಿ ಮಂಡಲ ಈ ವಿಷಯದಲ್ಲಿ ಮಂತ್ರಾಲೋಚನೆ ನಡೆಸುತ್ತಿರುವಾಗಲೇ ಕ್ರಾಸಿಲ್ ಛೇಂಬರ್ ಶನಿವಾರ ಸೇರಿ ಟೋಕಿಯೋ ಮೇಲೆ ೧೨೦೦ ಬಾಂಬರ್‌ಗಳು ಧಾಳಿ ನಡೆಸಿದವು.

ನಮ್ಮ ಆರೋಗ್ಯ ಆನಂದದಾಯಕ ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಒಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿಡೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಸ್ಯಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಸಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು.

ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೪, ಗೋವಿಂದಪ್ಪ ನಾಯಕ ರಸ್ತೆ,

ಜಿ. ಟಿ. ಮದರಾಸು.

ಜಪಾನ್ ಚಕ್ರವರ್ತಿ ಭವಿಷ್ಯ!

ಬೆಂಗಳೂರು ಏ 12 — ಜಪಾನಿನ ಚಕ್ರವರ್ತಿಯು ಪದಚ್ಯುತಿ ಮಾಡಲ್ಪಡುವುದಿಲ್ಲವೆಂದು ಬೆಂಗಳೂರು ಅಸ್ಟ್ರಲಾಜಿಕಲ್ ಮ್ಯಾಗಜಿನ್ನಿನ ಸಂಪಾದಕ ಶ್ರೀ ರಾವನ್ನರ ಭವಿಷ್ಯ ವಾಣಿ. ಮಾರ್ಚ್ 1946 ರವರೆಗೆ ಜಪಾನಿ ಚಕ್ರವರ್ತಿಗೆ ಬಹಳ ಕಷ್ಟಕಾಲವೆಂದೂ ಇದರಿಂದ ಅವರ ಅಧಿಕಾರ ನಾಮಾವಶೇಷವಾಗುವುದೆಂದೂ ಅವರು ಹೇಳಿದ್ದಾರೆ. 1967 ವರ್ಷದಲ್ಲಿ ಪ್ರಪಂಚಯುದ್ಧ ನಡೆಯುವ ಅವಕಾಶವಿದೆಯೆಂದಿರುವರು. ಮಾರ್ಚ್ 1946 ಕ್ಕೆ ಮುಂಚೆ ಭಾರತಕ್ಕೆ ಪ್ರಾಂತಿಕ ಸ್ವರಾಜ್ಯ ಲಭಿಸಿ, ಭಾರತಕ್ಕೆ ಅರ್ಧಂಬರ್ಧ ಸ್ವಾತಂತ್ರ್ಯ ದೊರೆಯುವುದೆಂದಿರುವರು.

ಂ ಂ

ಜಪಾನ್ ರಾಯಭಾರಿ

ಲಂಡನ್, ಏ 13 — ಲಿಸ್ಬನ್‌ನಲ್ಲಿರುವ ಜಪಾನ ರಾಯಭಾರಿ ಸಕ್ಯೂಯಾ ಬೆಪ್ಪು ಬೆಪ್ಪೇ ಆಗಿದ್ದಾನೆ. ಕೆಲವು ವಾರಗಳಿಂದ ಆತನಿಗೆ ಜಪಾನಿನಿಂದ ಕಾಗದಗಳಾಗಲೀ ಹಣಕಾಸಾಗಲಿ ದೊರೆತಿಲ್ಲ. ಜಪಾನು ಸೋತರೆ ಲಿಸ್ಬನ್‌ನಲ್ಲಿ ನುಂದೆ ವಾಸಮಾಡಿಕೊಂಡಿರಲು ಒಂದು ಸೇರಿಕುವನಂತೆ.

ಂ ಂ

ವೃತ್ತಾಂತ ಸಂಗ್ರಹ

ಸೆಕಾರವು ಹೆಚ್ಚು ಕಾಗದ ದಯಪಾಲಿಸಲಿಲ್ಲವಾಗಿ ಫ್ರಾನ್ಸಿನ ಪತ್ರಿಕೆಗಳು ಬಂದಾಗಿವೆ.

ಂ ಂ

ಅಮೇರಿಕಾಕ್ಕೆ ಜ। ಡಿಗಾಲ್ ಇದೇ 22 ರಲ್ಲಿ ಭೇಟಿ ಕೊಡುವರು.

ಂ ಂ

ಭಾರತ ಫಲಂಗಳ ಮೇಲೆ ಹತೋಟಿ ಶೀಘ್ರದಲ್ಲೇ ನಜವಾಗುವದಾಗಿ ತಿಳಿದು ಬಂದಿದೆ.

ಂ ಂ

ವೋಷಿಂ ಪ್ರಕಟಣೆಯಂತೆ ಜಪಾನಿನ ಶರಣಾಗತವನ್ನು ಒಪ್ಪಿದ ಬಗ್ಗೆ ಚಕ್ರವರ್ತಿಗಳಿಂದ ಕೂಡಲೇ ಸಂದೇಶವು ಹೊರಡುವುದೆಂದು ಜಪಾನ ವಾರ್ತೆ ಸಂಸ್ಥೆ ತಿಳಿಸಿದೆ.

ಈ ವಾರದ ಭವಿಷ್ಯ

(ಖಂ. ಜ್ಯೋತಿಷ್ಯರಿಂದ)

ಮೇಷ — ಆರೋಗ್ಯದಿಂದ ಕೂಡಿರುತ್ತೀರಿ. ಧನಾಭಾವವಿದ್ದರೂ ಮಾನಸಿಕ ಸ್ಥಿತಿಯು ಚೆನ್ನಾಗಿರುತ್ತದೆ. ವ್ಯವಹಾರದಲ್ಲಿಯೂ ಅನುಕೂಲವಿರುತ್ತದೆ.

ಃ ಃ

ವೃಷಭ — ಮನಸ್ಸು ಶಾಂತಿ ಸಮಾಧಾನಗಳಿಂದ ಕೂಡಿರುವುದಿಲ್ಲ. ಆರೋಗ್ಯವು ಉತ್ತಮವಾಗಿದ್ದು. ವ್ಯವಹಾರದಲ್ಲಿ ಜವಾಬ್ದಾರಿ ಹೆಚ್ಚುವುದು.

ಃ ಃ

ಮಿಥುನ — ದೇಹಿಕ, ಆರ್ಥಿಕ ಸ್ಥಿತಿಗಳು ಪ್ರೋತ್ಸಾಹಜನಕವಾಗಿರುತ್ತವೆ. ಮನೋಸ್ಥಿತಿಯು ಕೆಟ್ಟಿರುತ್ತದೆ. ಹೆದರದೇ ಇರಿ. ಮುಂದೆ ನಿಮ್ಮ ಸ್ಥಿತಿಯು ಉತ್ತಮಗೊಳ್ಳುತ್ತದೆ.

ಕರ್ಕಾಟಕ — ನಿಮಗಿದ್ದು ಹೆಚ್ಚು ಪ್ರಯತ್ನಗಳನ್ನು ಕೂಡಿದೆ. ಧನ ಆರ್ಥಿಕ ಸ್ಥಿತಿಗಳು ಉತ್ತಮವಿರುವುದು.

ಸಿಂಹ — ಮನಸ್ಸು ಅಹ್ಲಾದಕರವಾಗಿರುತ್ತದೆ. ಕಾರಣ, ಧನಾಭಾವವಿರುವುದಿಲ್ಲ. ಆರೋಗ್ಯವು ಶಕ್ತಿಯುತವಾಗಿರುವುದು.

ಃ ಃ

ಕನ್ಯಾ — ಸಾಧು ಸಮಾಗಮವಿರುವುದು. ಕನ್ಫ್ಯೂಲಕ ಮಾನಸಿಕ ಪರಿವರ್ತನೆಯನ್ನು ಹೊಂದಲು ಅಪೇಕ್ಷಿತ ದೊರೆಕುತ್ತಾಯಿರುತ್ತೆ. ಹಾಟ, ಸುಖ, ಶಾಂತಿಗಳು ಹೆಚ್ಚುತ್ತವೆ.

ಃ ಃ

ತುಲಾ — ಆರೋಗ್ಯ ವಿಷಯದಲ್ಲಿ ಹೆಚ್ಚು ಗಮನವನ್ನಿಡಿರಿ. ಅಹಾರನಿಯಮವನ್ನು ಪಾಲಿಸಿರಿ. ದೇಹಿಕ, ಆರ್ಥಿಕ, ವ್ಯವಹಾರಿಕ ಸ್ಥಿತಿಗಳು ಚನ್ನಾಗಿರುವುದಿಲ್ಲ.

ಃ ಃ

ವೃಶ್ಚಿಕ — ದುಸ್ಪರನ್ನು ದೂರವಿರಿಸಲ್ಪಡಲಿನಿಗೆ ಈ ವಾರ ಸುಖಕರಾಯಕವಾಗಿರುತ್ತದೆ. ಇದನ್ನು ಹೆಚ್ಚಿಸಲಿರಿ. ನಿಮ್ಮ ಆರೋಗ್ಯವು ಚನ್ನಾಗಿರುತ್ತದೆ.

ಃ ಃ

ಧನಸ್ಸು — ಯಶೋದಾಯಕವೂ, ಜಯಪ್ರಾಪ್ತಿಯೂ ಆದ ವಾರವಿದು. ಸಂತೋಷವು ಹೆಚ್ಚುತ್ತದೆ.

ಃ ಃ

ಮಕರ — ಲಾಭ, ಸನ್ಮಾನಗಳ ಯೋಗವಿದೆ. ಆರೋಗ್ಯ ಭಾಗ್ಯವನ್ನು ಸ್ವೀಕರಿಸಿರುತ್ತೀರಿ.

ಕುಂಭ — ಆರೋಗ್ಯದ ಕಡೆ ಹೆಚ್ಚು ಗಮನಕೊಡಿ. ಮಾನಸಿಕ ಆರ್ಥಿಕಸ್ಥಿತಿಗಳು ಉತ್ತಮವಾಗಿರುವುದು. ಕಾರ್ಯಗಳೆಲ್ಲಾ ವಿಘ್ನಗಳು ಪ್ರಾಪ್ತವಾಗುವ ಸಂಭವವಿದೆ.

ಮೀನ — ದೇವರನ್ನು ನಂಬಿ. ಮನೆಗೆ ವಿಜಯಪ್ರಾಪ್ತಿ ಸಿದ್ಧ. ಕ್ಲೇಶಕರವಾಗಿರುವಿರಿ. ನಿಮಗೆ ಈ ವಾರ ಬಹಳ ಅನುಕೂಲವಿರುತ್ತೆ.

17—8—45 ರಿಂದ

At Ranjit

DUKH-SUKH

ರಣಜಿತ ಟಾಕೀಸಿನಲ್ಲಿ

ನಿತಾರ — ರಾಮಮೂರ್ತಿ — ವಾಸಂತಿ ಪಾತ್ರವಹಿಸಿರುವರು

ದುಃಖ್-ಸುಖ್

(ಹಿಂದಿ)

ಪ್ರತಿ ದಿನ 3 ಆಟಗಳು

ಲೆ | ಜ | ಸಂ ಎಂ. ಜಿ. ಎಕ್. ಸ್ಕಾಫರ್ಡ್

AT Opera— 2 nd Week

ONE I LOVED

ಅಪೇರಾ ಟಾಕೀಸ್‌ನಲ್ಲಿ .... 2 ನೇ ವಾರ

ಮುಜರಿಂ (ಹಿಂದಿ)

ಶೋಭನಲಾಲ್, ಲೀಲಾದೇಸಾಯ್, ಯಾಕೂಬ್, ಜಗದೀಶ್ ಪಾತ್ರವಹಿಸಿರುವರು

ಮುಂದಿನ ಬದಲಾವಣೆ— ಭಾಯ್‌ಚಾರ

Next Change at OPERA—

" BROTHERHOOD "

— An Amar Releas

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

Edited, Printed and published by M. S. Krishna Rao, at the Satyavadi Press, Chamaraja Agrahar, Mysore.

For Good Printing—
L. N. Press
Sriramp st MYSORE